**ಕರ್ನಾಟಕ ರಕ್ಷಣಾ ವೇದಿಕೆ**

# ದೆಹಲಿಯಲ್ಲಿ ಕಾವೇರಿಗಾಗಿ ಕರವೇ ಗರ್ಜನೆ

ಮಾನ್ಯ ಪ್ರದಾನ ಮಂತ್ರಿಗಳಿಗೆ ಹಕ್ಕೊತ್ತಾಯ ಪತ್ರ ಸಲ್ಲಿಸುತ್ತಿರುವ ರಾಜ್ಯಾಧ್ಯಕ್ಷರಾದ ಶ್ರೀ ಟಿ. ಎ ನಾರಾಯಣಗೌಡ ಹಾಗು ಇತರ ಪದಾದಿಕಾರಿಗಳು.



**ಕರ್ನಾಟಕ ರಕ್ಷಣಾ ವೇದಿಕೆ**

## ದಿಲ್ಲಿಯಲ್ಲಿ ಕರವೇ ಕಹಳೆ

ನವದೆಹಲಿ, ಮಾ.2-ಕಾವೇರಿ ನ್ಯಾಯಾಧಿಕರಣದ ತೀರ್ಪು ವಿರೋಧಿಸಿ, ಕರ್ನಾಟಕ ರಕ್ಷಣಾ ವೇದಿಕೆಯ ಸಾವಿರಾರು ಕಾರ್ಯಕರ್ತರು, ಬುದ್ಧಿ ಜೀವಿಗಳು, ಸಾಹಿತಿಗಳು ರಾಜಧಾನಿ ದೆಹಲಿಯಲ್ಲಿ ಇಂದು ಕನ್ನಡದ ಕಹಳೆ ಮೊಳಗಿಸಿದರು. ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎನ್.ನಾರಾಯಣ ಗೌಡರ ನೇತೃತ್ವದಲ್ಲಿ ಬೆಂಗಳೂರಿನಿಂದ ನವದೆಹಲಿಗೆ ತೆರಳಿದ ಸಾವಿರಾರು ಮಂದಿ  ಇಂದು ದೆಹಲಿಯಲ್ಲಿ ಬೃಹತ್ ಪ್ರತಿಭಟನೆ, ಧರಣಿ, ರ್‍ಯಾಲಿ ನಡೆಸುವ ಮೂಲಕ ಕೇಂದ್ರ ಹಾಗೂ ಕಾವೇರಿ ನ್ಯಾಯಮಂಡಳಿಗೆ ಕನ್ನಡಿಗರ ಶಕ್ತಿ ಏನೆಂಬುದನ್ನು ಸಾಬೀತುಪಡಿಸಿದರು.

ಇದುವರೆಗೂ ರಾಜ್ಯದಲ್ಲಷ್ಟೇ ಸೀಮಿತವಾಗಿದ್ದ ಕಾವೇರಿ ಹೋರಾಟ ಈಗ ದೆಹಲಿಯತ್ತ ತಿರುಗಿದೆ. ಇದರಿಂದಾಗಿ ಕೇಂದ್ರ ಸರ್ಕಾರ ಹಾಗೂ ನ್ಯಾಯಮಂಡಳಿಯ ಹೃದಯ ಬಡಿತ ಹೆಚ್ಚಾಗಿದೆ.  ಫೆಬ್ರವರಿ 27ರಂದು ಸಂಪರ್ಕ ಕ್ರಾಂತಿ ರೈಲು ಮೂಲಕ ದೆಹಲಿಗೆ ತೆರಳಿದ್ದ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಮಂದಿ ಕರವೇ ಕಾರ್ಯಕರ್ತರು. ನ್ಯಾಯಮಂಡಳಿ ತೀರ್ಪಿನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಇಂದು ದೆಹಲಿಯಲ್ಲಿ ರಣಕಹಳೆ ಊದಿದರು.

ಇಂದು ಬೆಳಗ್ಗೆ ಅಂಬೇಡ್ಕರ್ ಭವನದಿಂದ ಸಂಸತ್ ಭವನದವರೆಗೆ ಸುಮಾರು 8 ಕಿ.ಮೀ. ಕಾಲ್ನಡಿಗೆ ಜಾಥಾದ ಮೂಲಕ ಬೃಹತ್ ರ್‍ಯಾಲಿ, ಪ್ರತಿಭಟನೆ ನಡೆಸಿ ಕೇಂದ್ರ ಸರ್ಕಾರಕ್ಕೆ ಬಿಸಿ ಮುಟ್ಟಿಸಿದರು. ನಂತರ ಸಂಸತ್ ಭವನದ ಎದುರು ಬೆಳಗ್ಗೆಯಿಂದ ಸಂಜೆಯವರೆಗೆ ಧರಣಿ ಸತ್ಯಾಗ್ರಹ ನಡೆಸಿದರು.

ಬೆಳಗ್ಗೆ ಅಂಬೇಡ್ಕರ್ ಭವನದಿಂದ ಸಂಸತ್ ಭವನದವರೆಗೆ ರ್‍ಯಾಲಿ ನಡೆಸಿದ್ದರಿಂದ ಸುಮಾರು 2 ಗಂಟೆಗೂ ಹೆಚ್ಚು ಕಾಲ ಆ ಮಾರ್ಗದಲ್ಲಿ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡು ಸಂಚಾರಿ ಒತ್ತಡದ ಬಿಸಿ ನವದೆಹಲಿಗೂ ಕೂಡ ತಟ್ಟಿತು. ರ್‍ಯಾಲಿ ಉದ್ದೇಶಿಸಿ ಮಾತನಾಡಿದ ವೇದಿಕೆಯ ರಾಜ್ಯಾಧ್ಯಕ್ಷ ನಾರಾಯಣಗೌಡ ಕಾವೇರಿ ನ್ಯಾಯಮಂಡಳಿ ತೀರ್ಪು ರಾಜ್ಯಕ್ಕೆ ಮರಣ ಶಾಸನವಾಗಿದೆ. ರಾಜ್ಯಕ್ಕೆ ನ್ಯಾಯ ಸಿಗುವವರೆಗೂ ನಮ್ಮ ಹೋರಾಟ ಮುಂದುವರೆಯಲಿದೆ ಎಂದು ಹೇಳಿದರು. ಒಂದು ವೇಳೆ ನಮ್ಮ ಕೂಗಿಗೆ ಓಗೊಡದಿದ್ದಲ್ಲಿ ಕರ್ನಾಟಕ, ಭಾರತ ಒಕ್ಕೂಟ ವ್ಯವಸ್ಥೆಯಿಂದಲೇ ಹೊರ ಬರಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಶೀಘ್ರವೇ ರಾಜ್ಯಕ್ಕೆ ನ್ಯಾಯ ದೊರೆಯದಿದ್ದಲ್ಲಿ ಅಸಹಕಾರ ಚಳವಳಿ ಮೂಲಕ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ವ್ಯವಸ್ಥೆಯನ್ನೇ ಧಿಕ್ಕರಿಸಲಾಗುವುದು.  ರೈಲು, ವಿಮಾನ, ಕೇಂದ್ರ ಸರ್ಕಾರಿ ಕಚೇರಿಗಳು ಎಲ್ಲವನ್ನು ಬಹಿಷ್ಕರಿಸಲಾಗುವುದು ಎಂದು ಹೇಳಿದರು. ಕೇಂದ್ರ ಹಾಗೂ ನ್ಯಾಯಮಂಡಳಿಯ ವಿರುದ್ಧ ರಾಜಧಾನಿಯಲ್ಲಿ ಇದೇ ಮೊದಲ ಬಾರಿಗೆ ಕನ್ನಡ ಪರ ಸಂಘಟನೆಗಳು, ಸಾಹಿತಿಗಳು ಹಾಗೂ ಬುದ್ಧಿಜೀವಿಗಳು ತಮ್ಮ ಶಕ್ತಿ ಪ್ರದರ್ಶಿಸಿದರಲ್ಲದೇ, ಕೇಂದ್ರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ರಾಜ್ಯಕ್ಕೆ ನ್ಯಾಯ ಒದಗಿಸುವಂತೆ ಒತ್ತಾಯಿಸಿದರು.

**ಕರ್ನಾಟಕ ರಕ್ಷಣಾ ವೇದಿಕೆ**





ಕರವೇ ಮಹಿಳೆಯರು ನವದೆಹಲಿಯಲ್ಲಿ ಇಂದು ನಡೆಸಿದ ಬೃಹತ್ ರ್‍ಯಾಲಿ.

**ಕರ್ನಾಟಕ ರಕ್ಷಣಾ ವೇದಿಕೆ**

## ದೆಹಲಿಯಲ್ಲಿ ಕರವೇ ಭಾರಿ ಪ್ರತಿಭಟನೆ

ಬೆಂಗಳೂರು, ಮಾ.೨- ಕಾವೇರಿ ನ್ಯಾಯಾಧೀಕರಣದ ತೀರ್ಪು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ನವದೆಹಲಿಯಲ್ಲಿ ಇಂದು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ವೇದಿಕೆ ಅಧ್ಯಕ್ಷ ನಾರಾಯಣಗೌಡರ ನೇತೃತ್ವದಲ್ಲಿ ನೂರಾರು ವೇದಿಕೆ ಕಾರ್ಯಕರ್ತರು ನವದೆಹಲಿಯ ಅಂಬೇಡ್ಕರ್ ಭವನದಿಂದ ಜಂತರ್ ಮಂತರ್‌ವರೆಗೆ ಸುಮಾರು 5 ಕಿ.ಮೀ. ದೂರ ಮೆರವಣಿಗೆ ನಡೆಸಿ, ರಾಜ್ಯಕ್ಕೆ ಅನ್ಯಾಯವಾಗಿರುವ ಕಾವೇರಿ ನ್ಯಾಯಾಧೀಕರಣದ ತೀರ್ಪನ್ನು ಖಂಡಿಸಿದರು.

ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ನೂರಕ್ಕೂ ಹೆಚ್ಚು ಮಹಿಳೆಯರು ಕನ್ನಡ ಬಾವುಟದ ಬಟ್ಟೆ ಧರಿಸಿದ್ದರು. ಕಲಾ ತಂಡಗಳು ಭಾಗವಹಿಸಿ ಮೆರವಣಿಗೆಗೆ ಕನ್ನಡ ಸಾಂಸ್ಕೃತಿಕ ರಂಗು ನೀಡಿದವು.

ನ್ಯಾಯಾಧೀಕರಣದ ವಿರುದ್ಧ ಧಿಕ್ಕಾರ ಕೂಗಿದ ಪ್ರತಿಭಟನಾಕಾರರು ಕಾವೇರಿ ನೀರು ಹಂಚಿಕೆಯಲ್ಲಿ ರಾಜ್ಯಕ್ಕೆ ನ್ಯಾಯ ದೊರೆಯದಿದ್ದರೆ, ಪ್ರತ್ಯೇಕ ರಾಷ್ಟ್ರದ ಬೇಡಿಕೆ ಮುಂದಿಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ನ್ಯಾಯಾಧೀಕರಣ ವಿರೋಧಿಸುವ, ಕೇಂದ್ರದ ಮೌನ ಖಂಡಿಸುವ ಬ್ಯಾನರ್, ಬಿತ್ತಿಪತ್ರಗಳನ್ನು ಪ್ರದರ್ಶಿಸಿದ ಪ್ರತಿಭಟನಾಕಾರರು ಕೂಡಲೇ ಮಧ್ಯ ಪ್ರವೇಶಿಸಿ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸುವಂತೆ ಒತ್ತಾಯಿಸಿದರು.

ರಾಜ್ಯದ 28 ಜಿಲ್ಲೆಗಳ ವೇದಿಕೆಯ ಕಾರ್ಯಕರ್ತರು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಜಂತರ್ ಮಂತರ್ ಮುಂದೆ ಪ್ರತಿಭಟನೆ ನಡೆಸಿದ ನಂತರ ಪ್ರಧಾನಿಯವರಿಗೆ ಮನವಿ ಪತ್ರ ಸಲ್ಲಿಸಲಾಯಿತು.